# ಚೈಲ್ಡ್‌ಲೈನ್-1098
# ತೆರೆದಮನೆ ಕಾರ್ಯಕ್ರಮದ ವರದಿ

ದಿನಾಂಕ 19/12/2017 ರಂದು ನಡ ಗ್ರಾಮ ಪಂಚಾಯತ್ ಬೆಳ್ತಂಗಡಿ ತಾಲೂಕಿನಲ್ಲಿ ಚೈಲ್ಡ್‌ಲೈನ್ ನ ತೆರೆದ ಮನೆ ಕಾರ್ಯಕ್ರಮವೂ ಬೆಳ್ತಂಗಡಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಯೋಗದೊಂದಿಗೆ ಪೂರ್ವಾಹ್ನ 11.00 ಕ್ಕೆ ನಡೆಯಿತು.



ಪ್ರಸ್ತಾವಿಕವಾಗಿ ಚೈಲ್ಡ್‌ಲೈನ್ ನ ಕೇಂದ್ರ ಸಂಯೋಜಕರಾದ ಶ್ರೀಯುತ ದೀಕ್ಷಿತ್ ರವರು ಚೈಲ್ಡ್ ಲೈನ್ 1098ರ ಕುರಿತು ಮಾಹಿತಿ ನೀಡಿದರು. ಮಕ್ಕಳ ಕಲ್ಯಾಣ ಸಮಿತಿಯ ಅದ್ಯಕ್ಷರಾದ ಶ್ರೀಯುತ ರೆನ್ನಿ ಡಿ'ಸೋಜರವರು ಮಕ್ಕಳ ಹಕ್ಕು ಮತ್ತು ರಕ್ಷಣೆ ,ಮಕ್ಕಳ ರಕ್ಷಣಾ ಸಮಿತಿ ಪ್ರತಿ ಗ್ರಾಮಸಭೆಯಲ್ಲಿ ಕಾರ್ಯ ನಿರ್ವಹಿಸುವಂತೆ,ಹಾಗೂ ಮಕ್ಕಳ ಕಲ್ಯಾಣ ಸಮಿತಿಯು ನಿರ್ವಹಿಸುವ ಕರ್ತವ್ಯ,ಜವಾಬ್ದಾರಿ ಕುರಿತು ಹಾಗೂ ಈ ಹಿಂದೆ ಕೂಡ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳು ಸಂಭವಿಸುತ್ತಿದ್ದು ಬೆಳಕಿಗೆ ಬರುವ ಪ್ರಕರಣಗಳ ಸಂಖ್ಯೆ ಕಡಿಮೆಯಿದ್ದು ಇತ್ತೀಚೇನ ದಿನಗಳಲ್ಲಿ ಪ್ರಕರಣಗಳು ಬೆಳಕಿಗೆ ಹೆಚ್ಚಾಗಿ ಬರುತ್ತಿದೆ. ಎಂದು ಮಾಹಿತಿ ನೀಡಿದರು.



ಬೆಳ್ತಂಗಡಿ ಪೋಲೀಸ್ ಠಾಣೆಯ ಆರಕ್ಷರಾದ ಶ್ರೀಯುತ ಡ್ಯಾನಿಯವರು ಮಾತನಾಡುತ್ತಾ ಮಕ್ಕಳಿಗೆ ಸಮಸ್ಯೆಗಳು ಆದಾಗ ಯಾವುದೇ ಹಿಂಜರಿಕೆಯಿಲ್ಲದೇ ದೂರು ನೀಡಲು ಮುಂದೆ ಬರಬೇಕು ,ಪ್ರತಿ ಪೋಲೀಸ್ ಠಾಣೆಯಲ್ಲಿ ಮಕ್ಕಳ ಸ್ನೇಹಿ ಪೋಲೀಸರಿದ್ದು ಮಕ್ಕಳಿಗೆ ಸಮಸ್ಯೆಯಾದಾಗ ತಾವು ದಿನದ 24 ಗಂಟೆಯೂ ಸೇವೆ ನೀಡಲು ಸಿದ್ದರಿದ್ದೇವೆ ಎಂದು ತಿಳಿಸಿದರು. ಶಿಕ್ಷಣ ಇಲಾಖೆಯಿಂದ ಶ್ರೀಯುತ ರಮೇಶ್ ಪೈಲಾರ್‌ರವರು ಮಾತನಾಡಿ ಸರಕಾರವು ಮಕ್ಕಳ ಆರೋಗ್ಯದ ದೃಷ್ಠಿಯಿಂದ ಮದ್ಯಾಹ್ನದ ಬಿಸಿಯೂಟ ಹಾಗೂ ಕ್ಯಾಲ್ಸಿಯಂ ಮಾತ್ರೆಗಳನ್ನು ವಿತರಿಸುತ್ತಿದೆ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಗಣತಿ ಆರಂಭಿಸಲಾಗಿದ್ದು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ತಿಳಿಸಿದರು.ಜಿಲ್ಲಾ ಮಕ್ಕಳ ಘಟಕದ ಸಿಬ್ಬಂದಿ

ಕು.ಯಶೋಧರವರು ಇಲಾಖೆಯಿಂದ ಮಕ್ಕಳಿಗೆ ಸಿಗುವ ಸವಲತ್ತು ಹಾಗೂ ದತ್ತು ಪ್ರಕ್ರಿಯೆಯ ಬಗ್ಗೆ ಮಾಹಿತಿ ನೀಡಿದರು ಕಾರ್ಯಕ್ರಮದಲ್ಲಿ ಭಾಗವಹಿಸಿದವರನ್ನು ಶ್ರೀಯುತ ಜಾಕಿರ್ ಹುಸೇನ್ ರವರು ಸ್ವಾಗತಿಸಿ ಶ್ರೀಯುತ ಗೋಪಾಲ ಕೃಷ್ಣ ವಂದಿಸಿದರು ಚೈಲ್ಡ್‌ಲೈನ್ ತಂಡದ ಆಶಾಲತಾರವರು ಕಾರ್ಯಕ್ರಮ ನಿರೂಪಿಸಿದರು ಈ ಕಾರ್ಯಕ್ರಮದಲ್ಲಿ ನಡ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶೀಮತಿ ಪೂರ್ಣಿಮಾ ,ಉಪಧ್ಯಾಕ್ಷರಾದ ಶ್ರೀಯುತ ಸುಧಾಕರ್ ರವರು, ಮಕ್ಕಳ ಕಲ್ಯಾಣ ಸಮಿತಿಯ ಅದ್ಯಕ್ಷರಾದ ಶ್ರೀಯುತ ರೆನ್ನಿ ಡಿ'ಸೋಜ, ಆರೋಗ್ಯ ಇಲಾಖೆಯಿಂದ ಡಾ\ ಸಿಂಧೂರಾಣಿ , ಬೆಳ್ತಂಗಡಿ ಪೋಲೀಸ್ ಠಾಣೆ ಯಿಂದ ಶ್ರೀಯುತ ಡ್ಯಾನಿ, ಶಿಕ್ಷಣ ಇಲಾಖೆಯಿದ ಶ್ರೀಯುತ ರಮೇಶ್ ಪೈಲಾರ್ ,ಜಿಲ್ಲಾ ಮಕ್ಕಳ ರಕ್ಷಣ ಘಟಕದಿಂದ ಕು.ಯಶೋಧ , ಬೆಳ್ತಂಗಡಿ ಶಿ.ಸಂ ಕೇಂದ್ರದ ಅಧ್ಯಕ್ಷರಾಧ ಶ್ರೀಯುತ ಶ್ರೀಧರ್ ರಾವ್ ,ಉಪಾಧ್ಯಕ್ಷರಾದ ಶ್ರೀಮತಿ ಸಿ.ಕೆ ಚಂದ್ರಕಲಾ,ಕಾರ್ಯದರ್ಶಿಯವರಾದ ಶ್ರೀಯುತ ಗೋಪಾಲ ಕೃಷ್ಣ ಹಾಗೂ ಜಾಕಿರ್ ಹುಸೇನ್ ತಂಡ ಸದಸ್ಯರಾದ ಅಸುಂತಾ,ನಾಗರಾಜ್ ಕೀರ್ತಿಶ್ ಉಪಸ್ಥಿತರಿದ್ದರು.





**ವರದಿ: ಶ್ರೀಮತಿ.ಆಶಾಲತ**

ಸದಸ್ಯರು

ಚೈಲ್ಡ್‌ಲೈನ್–1098 ದ.ಕ.ಜಿಲ್ಲೆ